# <u>ಪತ್ರಿಕಾ ಪ್ರಕಟಣೆ</u>

## ಐ.ಐ.ಟಿ. ಧಾರವಾಡದಲ್ಲಿ ಎನ್‌ಎಸ್‌ಎಸ್ ಘಟಕದ ಉದ್ಘಾಟನೆಯ ಸಂದರ್ಭದಲ್ಲಿ ರಕ್ತದಾನ ಅಭಿಯಾನ

ಭಾರತೀಯ ತಂತ್ರಜ್ಞಾನ ಸಂಸ್ಥೆ ಧಾರವಾಡ ತನ್ನ ರಾಷ್ಟ್ರೀಯ ಸೇವಾ ಯೋಜನೆ ಯ (NSS) ಘಟಕವನ್ನು 05 ಫೆಬ್ರುವರಿ 2022 ರಂದು ಉದ್ಘಾಟಿಸಿದೆ. ಎಲ್ಲಾ ಕೋವಿಡ್ ಮಾನದಂಡಗಳನ್ನು ಅನುಸರಿಸಿ ವಿದ್ಯಾರ್ಥಿಗಳು, ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಸಮ್ಮುಖದಲ್ಲಿ NSS ಘಟಕವನ್ನು IIT ಧಾರವಾಡದ ನಿರ್ದೇಶಕ ಪ್ರೊ. ಪಿ. ಶೇಷು ಅವರು ಉದ್ಘಾಟಿಸಿದರು.

ಧಾರವಾಡ ರಕ್ತ ನಿಧಿ ಸಂಸ್ಥೆಯ ಬೆಂಬಲದೊಂದಿಗೆ ಅದೇ ದಿನ ರಕ್ತದಾನ ಅಭಿಯಾನವನ್ನು ಆಯೋಜಿಸಲಾಯಿತು. ಜೀವ ಉಳಿಸುವ ಉದಾತ್ತ ಉದ್ದೇಶಕ್ಕಾಗಿ ಮುಂದೆ ಬಂದ ಎಂಬತ್ನಾಲ್ಕು ದಾನಿಗಳ ಭಾಗವಹಿಸುವಿಕೆಗೆ ರಕ್ತದಾನದ ಅಭಿಯಾನ ಸಾಕ್ಷಿಯಾಯಿತು.




ಭಾರತೀಯ ತಂತ್ರಜ್ಞಾನ ಸಂಸ್ಥೆಯ ನಿರ್ದೇಶಕರು **ಪ್ರೊ. ಪಿ. ಶೇಷು** ಅವರು ರಕ್ತದಾನಿಗಳಿಗೆ ಪ್ರಮಾಣ ಪತ್ರವನ್ನು ನೀಡಿ ಅಭಿನಂದಿಸಿದರು ಮತ್ತು ಧಾರವಾಡ ಬ್ಲಡ್ ಬ್ಯಾಂಕ್ನ ವೈದ್ಯಾಧಿಕಾರಿ ಆದಂತಹ **ಡಾ.ಪ್ರಕಾಶ ಕೆಳಗೇರಿ**, ಇವರು ವಿವಿಧ ತಳಿಯ ಸಸಿಗಳನ್ನು ನೀಡಿ ಕಾರ್ಯಕ್ರಮವನ್ನು ಆರಂಭಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರನ್ನು ಉದ್ದೇಶಿಸಿ ಮಾತನಾಡಿದ ಪ್ರೊ.ಪಿ.ಶೇಷು, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯಲ್ಲಿ ಮಾನವೀಯತೆಯ ನಿಸ್ವಾರ್ಥ ಸೇವೆಯ ಭಾವನೆಯನ್ನು ಮೂಡಿಸಲು ಐ.ಐ.ಟಿ. ಧಾರವಾಡದ NSS ಘಟಕವು ಇಂತಹ ಶಿಬಿರಗಳನ್ನು ಆಗಾಗ್ಗೆ ಆಯೋಜಿಸಬೇಕು ಎಂದು ಹೇಳಿದರು.

ಭಾರತೀಯ ತಂತ್ರಜ್ಞಾನ ಸಂಸ್ಥೆಯ NSS ಘಟಕವು ರಾಷ್ಟ್ರೀಯ ಸೇವಾ ಯೋಜನೆಯ ಗುರಿ ಮತ್ತು ಉದ್ದೇಶಗಳಿಗೆ ಬದ್ಧವಾಗಿದ್ದು, ಹುಬ್ಬಳ್ಳಿ-ಧಾರವಾಡ ನಗರ ಹಾಗು ಗ್ರಾಮೀಣ ಪ್ರದೇಶಗಳಲ್ಲಿ ಪರಿಸರ ಸಮಸ್ಯೆಗಳ ಬಗ್ಗೆ ಜಾಗೃತಿ, ಸ್ವಚ್ಛತಾ ಅಭಿಯಾನಗಳು, ಸಾಕ್ಷರತಾ ಕಾರ್ಯಕ್ರಮಗಳು ಮುಂತಾದ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಸ್ಥಳೀಯ ಸಮುದಾಯದಲ್ಲಿ ಸಕಾರಾತ್ಮಕ ಪರಿಣಾಮ ಬೀರಲು ಘಟಕವು ಎದುರು ನೋಡುತ್ತಿದೆ.